ಮೇಲ್ಕಂಡಂತೆ ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗೆ ನಿಯೋಜನೆ ಮೇರೆಗೆ ಹಾಗೂ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳನ್ನು ಹೊರ ಸಂಪನ್ಮೂಲದಿಂದ ಪಡೆದು ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಮೇಲ್ವಿಚಾರಕರ ಹುದ್ದೆಗಳ ನೇಮಕಾತಿ ಬಗ್ಗೆ ಕೆಪಿಎಸ್‌ಸಿ ಯಿಂದ ಅರ್ಜಿ ಕರೆಯಲಾಗಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ ಸದರಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮವಾದ ಆಹಾರ ವಿತರಣೆ ಯಾಗುತ್ತಿಲ್ಲದಿರುವ ಬಗ್ಗೆ ದೂರುಗಳೇನಾದರೂ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಯಾವುದೇ ದೂರುಗಳು ಇರುವುದಿಲ್ಲ.

122 ಶ್ರೀ ಹೆಚ್.ಡಿ. ರೇವಣ್ಣ, ಶಾಸಕರು
ಸಮಾಜ ಕಲ್ಯಾಣ ಸಚಿವರು

ಅ) ಹಾಸನ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಎಷ್ಟು? ಎಲ್ಲಾ ಶಾಲೆಗಳು ಸ್ವಂತ ಹಾಗೂ ಸುಸಜ್ಜಿತವಾದ ಕಟ್ಟಡಗಳನ್ನು ಹೊಂದಿವೆಯೇ? ತಾಲ್ಲೂಕುವಾರು ವಿವರಗಳನ್ನು ನೀಡುವುದು.

ಹಾಸನ ಜಿಲ್ಲೆಯಲ್ಲಿ ಒಟ್ಟು 21 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇರುತ್ತವೆ. ಈ ವರ್ಷ 5 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪೈಕಿ 5 ವಸತಿ ಶಾಲೆಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು 4 ವಸತಿ ಶಾಲೆಗಳ ಕಾಮಗಾರಿ ಪ್ರಗತಿಯಲ್ಲಿವೆ. ಆ ಸಂಬಂಧದ ತಾಲ್ಲೂಕು-ವಾರು ವಿವರಗಳನ್ನು ಅನುಬಂಧ-1 ರಲ್ಲಿ ನಮೂದಿಸಲಾಗಿದೆ.

ಆ) ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಸುಸಜ್ಜಿತ ಕಟ್ಟಡಗಳನ್ನು ಯಾವಾಗ ಒದಗಿಸಿಕೊಡಲಾಗುವುದು?

ಅಂತಹ ವಸತಿ ಶಾಲೆಗಳಿಗೆ ನಿವೇಶನ ಲಭ್ಯವಾದ ನಂತರ ಸೂಕ್ತ ಆಯವ್ಯಯ ಒದಗಿಸಿಕೊಂಡು ಶಾಲಾ ಸಂಕೀರ್ಣಗಳನ್ನು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಇ) ಸದರಿ ಮೊರಾರ್ಜಿ ಶಾಲೆ ಮತ್ತು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

ಈ ಮೊರಾರ್ಜಿ ದೇಸಾಯಿ ವಸತಿ- ಶಾಲೆಗಳಿಗೆ ಮಂಜೂರಾಗಿರುವ ಹುದ್ದೆಗಳ ಎದುರಿಗೆ ಹೊರಗುತ್ತಿಗೆ ಆಧಾರದ ಮೇಲೆ ನಿಯೋಜನೆ ಮೇಲೆ ಭರ್ತಿ

ಮಾಡಲಾಗಿರುವುದರಿಂದ ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ. ಏತನ್ಮಧ್ಯೆ ಈ ಹುದ್ದೆಗಳಿಗೆ ಖಾಯಂ ಆಗಿ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಈ ವರ್ಷ ಮಂಜೂರು ಮಾಡಿದ್ದು ಬೋಧಕ ವರ್ಗದ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ತುಂಬಲು ಅನುಮತಿ ನೀಡಲಾಗಿದೆ.

ಈ) ಸದರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮವಾದ ಆಹಾರ ವಿತರಣೆಯಾಗುತ್ತಿದೆಯೇ? ಈ ಬಗ್ಗೆ ದೂರುಗಳೇನಾದರೂ ಬಂದಿದೆಯೇ? ದೂರುಗಳು ಬಂದಿದ್ದಲ್ಲಿ ಸಂಬಂಧಿಸಿದವರ ಮೇಲೆ ಕೈಗೊಂಡ ಕ್ರಮಗಳೇನು?

ಈ ವಸತಿ ಶಾಲೆಗಳಲ್ಲಿ ಗುಣಮಟ್ಟದ ಆಹಾರವನ್ನು ನೀಡುತ್ತಿದ್ದು ಈವರೆಗೂ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 122ಕ್ಕೆ ಅನುದಾನ

ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ವಿವರ

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಕ್ರ ಸಂ.	ಸ್ಥಳ	ವರ್ಗ	ಮಂಜೂರಾದ ವರ್ಷ	ಕಟ್ಟಡದ ವಿವರ
ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು							
1	ಹಾಸನ	ಹಾಸನ	1	ದುದ್ದ	ಪ.ಜಾತಿ	1999–2000	ಸ್ವಂತ ಕಟ್ಟಡ
		ಬೇಲೂರು	2	ಬೇಲೂರು (ಟೌನ್)	ಪ.ಜಾತಿ	2006–07	ಸ್ವಂತ ಕಟ್ಟಡ ನಿರ್ಮಾಣ ವಾಗುತ್ತಿದೆ.
		ಹೊಳೆನರಸೀ ಪುರ	3	ಹೊಳೆನರಸೀ ಪುರ	ಪ.ಜಾತಿ	2007–08	
		ಅರಕಲ ಗೂಡು	4	ಅರಕೆಲ ಗೂಡು (ಮಲ್ಲಿಪಟ್ಟ)	ಪ.ಜಾತಿ	2007–08	
		ಸಕಲೇಶಪುರ	5	ಸಕಲೇಶಪುರ	ಪ.ಜಾತಿ	2008–09	
		ಚೆನ್ನರಾಯ ಪಟ್ಟಣ	6	ಗೂರಮಾರನ ಹಳ್ಳಿ	ಹಿಂ.ವರ್ಗ	1996–97	ಸ್ವಂತ ಕಟ್ಟಡ
		ಚೆನ್ನರಾಯ ಪಟ್ಟಣ	7	ನುಗ್ಗೇಹಳ್ಳಿ	ಹಿಂ.ವರ್ಗ	2007–08	
		ಚೆನ್ನರಾಯ ಪಟ್ಟಣ	8	ಚೆನ್ನರಾಯ ಪಟ್ಟಣ – ಕುಂದೂರು ಮರ	ಹಿಂ.ವರ್ಗ	2007–08	

				ದಂಡಿಗನಹಳ್ಳಿ ಹೋಬಳಿ			
		ಹೊಳೆನರಸೀಪುರ	9	ಹರಿಹರಪುರ	ಹಿಂ.ವರ್ಗ	1996–97	ಸ್ವಂತ ಕಟ್ಟಡ
		ಹೊಳೆನರಸೀಪುರ	10	ತಟ್ಟೆಕೆರೆಬಾರೆ	ಹಿಂ.ವರ್ಗ	2006–07	ಸ್ವಂತ ಕಟ್ಟಡ ನಿರ್ಮಾಣವಾಗುತ್ತಿದೆ.
		ಹೊಳೆನರಸೀಪುರ	11	ಹೊಳೆನರಸೀಪುರ, ಹರದನಹಳ್ಳಿ, ಹಳೇಕೋಟೆ ಹೋಬಳಿ	ಹಿಂ.ವರ್ಗ	2007–08	
		ಹಾಸನ	12	ಮಸಳೆ ಹೊಸಳ್ಳಿ	ಹಿಂ.ವರ್ಗ	2004–05	ಸ್ವಂತ ಕಟ್ಟಡ
		ಅರಕಲಗೂಡು	13	ಅರಕಲಗೂಡು (ಬರಗೂರು)	ಹಿಂ.ವರ್ಗ	2006–07	ಸ್ವಂತ ಕಟ್ಟಡ ನಿರ್ಮಾಣವಾಗುತ್ತಿದೆ.
		ಅರಸೀಕೆರೆ	14	ರಂಗಾಪುರ	ಹಿಂ.ವರ್ಗ	2006–07(A)	
		ಸಕಲೇಶಪುರ	15	ಸಕಲೇಶಪುರ – ಆಲೂರು	ಹಿಂ.ವರ್ಗ	2007–08	
		ಸಕಲೇಶಪುರ	16	ಸಕಲೇಶಪುರ (ಹೆತ್ತೂರು)	ಹಿ.ವರ್ಗ	2007–08	
		ಬೇಲೂರು	17	ಬೇಲೂರು (ಜೆ.ಪಿ.ನಗರ ಟೌನ್)	ಹಿ.ವರ್ಗ	2008–09 (ಅಲೆಮಾರಿ ಜನಾಂಗದವರಿಗಾಗಿ)	
		ಹಾಸನ	18	ಹಾಸನ	ಅಲ್ಪ ಸಂಖ್ಯಾತರ	2005–06	ಸ್ವಂತ ಕಟ್ಟಡ ನಿರ್ಮಾಣವಾಗುತ್ತಿದೆ.
		ಹೊಳೆನರಸೀಪುರ	19	ಹೊಳೆನರಸೀಪುರ	ಅಲ್ಪ ಸಂಖ್ಯಾತರ	2006–07	
		ಅರಕಲಗೂಡು	20	ಅರಕಲಗೂಡು ಟೌನ್	ಅಲ್ಪ ಸಂಖ್ಯಾತರ	2007–08	
		ಹಾಸನ	21	ಯುಗಚಿ ವಿದ್ಯಾಪೀರ ಕಂದಲಿ	ಸಾಮಾನ್ಯ	1995–96	ಸ್ವಂತ ಕಟ್ಟಡ
ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು							
		ಅರಕಲಗೂಡು	22	ಅರಕಲಗೂಡು	ಪ.ಜಾತಿ	2009–10	
		ಹೊಳೆನರಸೀಪುರ	23	ಹೊಳೆನರಸೀಪುರ	ಪ.ಜಾತಿ	2009	

		ಬೇಲೂರು	24	ಬೇಲೂರು	ಪ.ಜಾತಿ	2009	
		ಚನ್ನರಾಯ ಪಟ್ಟಣ	25	ಚನ್ನರಾಯ ಪಟ್ಟಣ	ಪ.ಜಾತಿ	2009	
		ಅರಸೀಕೆರೆ	26	ಅರಸೀಕೆರೆ	ಪ.ಜಾತಿ	2009	

ಹಜ್ ಮತ್ತು ವಕ್ಫ್ ಕಾರ್ಯಕ್ರಮಗಳ ಬಗ್ಗೆ ಮಾಹಿತಿ

141 ಶ್ರೀ ಸಿದ್ದು ಸವದಿ (ತೇರದಾಳ್),ಎಂ.ಎಲ್.ಎ
ಪ್ರೊ.ಡಾ.ಮುಮ್ತಾಜ್ ಅಲಿ ಖಾನ್,(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) 2009–10ನೇ ಸಾಲಿನಲ್ಲಿ ಹಜ್ ಯಾತ್ರಿಗಳ ಸಂಖ್ಯೆ ಎಷ್ಟು?

2009–10 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಹಜ್ ಯಾತ್ರೆಗಾಗಿ 5756 ಯಾತ್ರಿಗಳು ಆಯ್ಕೆಯಾಗಿರುತ್ತಾರೆ.

ಆ) ಹಾಗಿದ್ದರೆ, ಬಾಗಲಕೋಟೆ ಜಿಲ್ಲೆಗೆ ಮತ್ತು ತೇರದಾಳ ಮತಕ್ಷೇತ್ರದ ಯಾತ್ರಿಗಳ ಸಂಖ್ಯೆ ಎಷ್ಟು ಹಾಗೂ ಅವರ ಹೆಸರುಗಳ ವಿವರ ನೀಡುವುದು.

2009–10ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಯಿಂದ ಹಜ್ ಯಾತ್ರೆಗಾಗಿ 164 ಯಾತ್ರಿಗಳು ದಿನಾಂಕ: 28–04–2009ರಂದು ಬೆಂಗಳೂರಿನಲ್ಲಿ ನಡೆದ ಖುರ್ರಾದ ಮೂಲಕ ಆಯ್ಕೆಯಾಗಿರುತ್ತಾರೆ. ಬಾಗಲಕೋಟೆ ಜಿಲ್ಲೆಯಿಂದ ಆಯ್ಕೆಯಾಗಿರುವ ಯಾತ್ರಿಗಳ ಹೆಸರುಗಳ ವಿವರವನ್ನು ಅನುಬಂಧ–ಎ ನಲ್ಲಿ ವಿವರಿಸಲಾಗಿದೆ.

ಇ) ವಕ್ಫ್ ಮಂಡಳಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು?

ವಕ್ಫ್ ಸಂಸ್ಥೆಗಳ ನಿರ್ಮಾಣ, ದುರಸ್ಥಿ ಹಾಗೂ ಜೀರ್ಣೋದ್ಧಾರ ಮುಂತಾದ ಕಾರ್ಯಕ್ರಮಗಳನ್ನು ವಕ್ಫ್ ಮಂಡಳಿ ಹಮ್ಮಿಕೊಂಡಿರುತ್ತದೆ.

ಈ) ತೇರದಾಳ ಮತ ಕ್ಷೇತ್ರದಲ್ಲಿ ವಕ್ಫ್ ಮಂಡಳಿ ಕೈಗೊಂಡಿರುವ ಕಾರ್ಯಕ್ರಮಗಳು ಅನುಷ್ಠಾನಗೊಂಡಿರುತ್ತವೆಯೇ?

ತೇರದಾಳ ಮತ ಕ್ಷೇತ್ರಕ್ಕೆ ವಕ್ಫ್ ಮಂಡಳಿಯಿಂದ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ.

ಉ) 2009–10ನೇ ಸಾಲಿಗೆ ಶಾದಿ ಮಹಲ್‌ಗಳ ನಿರ್ಮಾಣಕ್ಕೆ ಮೀಸಲಿರಿಸಿರುವ ಅನುದಾನವೆಷ್ಟು? ಹಾಗಿದ್ದಲ್ಲಿ, ತೇರದಾಳ ಮತಕ್ಷೇತ್ರದಲ್ಲಿ ಬರುವ ಶಾದಿಮಹಲ್‌ಗಳಿಗೆ ಒದಗಿಸಿರುವ ಅನುದಾನ ಎಷ್ಟು?

2009–10ನೇ ಸಾಲಿಗೆ ಶಾದಿಮಹಲ್ ನಿರ್ಮಾಣಕ್ಕಾಗಿ ರೂ.1,500.00 ಲಕ್ಷಗಳನ್ನು ಮೀಸಲಿರಿಸಲಾಗಿದೆ. ಅನುದಾನವನ್ನು ಮತಕ್ಷೇತ್ರವಾರು